ಸ್ನಾನ ಮಾಡಿ ಬಂದು ಮುಟ್ಟಬಹುದು. ಆದರೆ ಅದೆಲ್ಲ ಪರ್‌ಫೆಕ್ಟ್ ಆಗಿ ಚಾರ್ಜಲ್ಲಿರಬೇಕಲ್ಲಾ' ಎಂದ ಆ ಶ್ರೀಮಂತ. ಗೋವಿಂದ 'ಇದೆ ಇದೆ ಬೇಕಾದಷ್ಟು ಚಾರ್ಜ್ ಆಗಿದೆ' ಎಂದ. 'ಹೌದು ಹೌದು ಆಗಿನಿಂದ ನೀವು ಹಿಂಬದಿಯಿಂದ ಬಿಡ್ತಾ ಇರೊ ಊಸುಗಳಿಂದಲೆ ಗೊತ್ತಾಗ್ತಿದೆ' ಎಂದ. 'ನೋ; ನೋ ಯಾರೇಳಿದ್ರು... ನಾನು ಊಸೇ ಇಲ್ಲ' ಎಂದ. 'ಸರ್... ಅದೆಲ್ಲ ಮ್ಯಾಟರ್ ಬೇಡ... ನಿಮ್ಮಂತಹ ಬಹುದೊಡ್ಡ ಉದ್ಯಮಿ... ಜೀನಿಯಸ್ ಊಸಿನ ಬಗ್ಗೆ ಮಾತಾಡಬಾರದು... ನಿಮ್ಮ ಶ್ರೀಮಂತಿಕೆಯ ಸಕ್ಸಸ್ ಬಗ್ಗೆ ಮಾತಾಡಿ... ನಮಗೊಂದಿಷ್ಟು ತಿಳಿಯುತ್ತದೆ' ಎಂದ ಪರಮಾನಂದ. 'ಯಸ್ ಯಸ್... ಎಕ್ಸಾಕ್ಟ್‌ಲಿ. ಒಂದು ಬಡ ದೇಶದಲ್ಲಿ ಅತಿ ಶ್ರೀಮಂತರ ಸಕ್ಸಸ್ ತಿಳಿದುಕೊಂಡರೆ ನಮ್ಮ ಪೂರ್ವಗ್ರಹಗಳೂ ಬದಲಾಗಬಹುದು. ಇದು ಉದ್ಯಮಶೀಲತೆಯ ಯುಗ... ಜಾಗತೀಕರಣವನ್ನು ನೀವು ಹೇಗೆ ಇಂಟರ್‌ಪ್ರೇಟ್ ಮಾಡ್ತೀರಿ ಎಂಬುದು ಮುಖ್ಯ' ಎಂದು ಪ್ರೊಫೆಸರ್ ಒತ್ತಾಯಿಸಿದರು. 'ಅದರಿಂದ ಮೂರು ಪೈಸೆಯ ಲಾಭವೂ ನಿಮಗೆ ಆಗಲ್ಲ... ಅದರ ಮಹಾ ವ್ಯೂಹ ಹೆದ್ದಾರಿಗಳನ್ನು ಗ್ರಹಿಸಲು ಬೇಕಾದ ತಿಳಿವಳಿಕೆಯೇ ನಿಮಗಿಲ್ಲ. ನೀವು ಬಡ ಸಾಹಿತಿಗಳು. ಸಭ್ಯರು. ನಿಮ್ಮ ಜೊತೆ ಸುಮ್ಮನೆ ಹರಟೆ ಹೊಡೆವೆ. ನನಗೆ ಮೀರಿದ್ದೇನಾದರೂ ನಿಮ್ಮಿಂದ ಬಂದರೆ ತೆಗೆದುಕೊಳ್ಳುವೆ' ಎಂದು ಗೋವಿಂದನತ್ತ ನೋಡುತ್ತ... ನಗುತ್ತ... ಮತ್ತೆ ಮತ್ತೆ ಕುಹಕವಾಡುವಂತೆ; 'ನೋಡಿದ್ರಾ ನೀವು ಆ ದಪ್ಪ ಸಿಗರೇಟು ಸೇದಿ ಹೊಗೆ ಬಿಡುತ್ತಲೇ ಕೆಳಗೆ ಸೈಲೆಂಟಾಗಿ ಊಸ್ತಾ ಇದ್ದೀರ... ವಿಜ್ಞಾನದಲ್ಲಿ ಮರೆಮಾಚಿ ಸಾಗುವ ಚಲನೆಗೆ ಬಹಳ ಮಹತ್ವ ಇದೆ. ಮನುಷ್ಯರು ಒಂದು ವೇಳೆ ಊಸುವ ದಾರಿಯನ್ನೆ ಕಂಡುಕೊಳ್ಳದೆ ಹೋಗಿದ್ದರೆ ಏನೆಲ್ಲ ಅನಾಹುತಗಳು ಆಗ್ತಿದ್ದವು ಎಂದು ಯೋಚನೆ ಮಾಡಿದ್ದೀರಾ... ನ್ಯೂಟನ್, ಐನ್‌ಸ್ಟೈನ್ ಈ ಊಸುಗಳ ಬಗ್ಗೆ ಏನೆಂದು ಇಂಟರ್‌ಪ್ರಿಟೇಷನ್ ಮಾಡಿದ್ದಾರೆಂಬುದು ನಿಮಗೆ ಗೊತ್ತೇ...' ಎಂದ.

ಆ ಜೀನಿಯಸ್ ಮನುಷ್ಯ ನಮ್ಮನ್ನೆಲ್ಲ ಊಸುಗಳಿಗೆ ಹಿಡಿದು ಕಟ್ಟಿಹಾಕುವಂತೆ ಕಂಡ. ಗೋವಿಂದ ತಲೆಕೆಟ್ಟವನು. 'ಹಾಗಾದರೆ ಊಸುಗಳಿಗೂ ವ್ಯಕ್ತಿತ್ವ ಇದೆ ಅಂತ್ಲಾ ನಿಮ್ಮ ನಿಲುವು' ಎಂದ. 'ಎಕ್ಸಾಕ್ಟ್‌ಲಿ... ನಾವು ಏನನ್ನು ತಿನ್ನುತ್ತೇವೊ ಅದನ್ನೇ ತೇಗಬೇಕು ಊಸಬೇಕು' ಎಂದ ಜೀನಿಯಸ್. ಹಾಗಾದ್ರೆ ಈ ವೈದಿಕರೆಲ್ಲ ಮಂತ್ರ ಹೇಳ್ತಾನೇ ದೇವರ ಗುಡಿಯಲ್ಲೇ ಊಸುವರಲ್ಲಾ; ಆ ಭಗವಂತನಿಗೂ ಊಸುಗಳ ಸಂಬಂಧ ಇದೆಯಾ... 'ಛೇ ಛೇ ಇವೆಲ್ಲ ಅಸಹ್ಯ... ಪಾಪ ಆ ದೇವರಿಗೆ ಈ ಶತಕೋಟಿ ಮನುಷ್ಯರ ಊಸಿನ ಊದುಬತ್ತಿಯ ಅನ್ವಯ ಸರಿ ಇಲ್ಲ. ತಪ್ಪಿದು. ನಾವು ಈ ದೇಶದ ಬಡವರ ಬಗ್ಗೆ ಮಾತಾಡುವ. ತಿನ್ನೋಕೆ ಏನೂ ಇಲ್ಲದೇ ಊಸೋದಿಕ್ಕೂ ಆಗದೆ ಉಸ್ಸಂತ ಬಿದ್ದಿರುವ ಜನರ ಬಗ್ಗೆ ಕನಿಷ್ಠ ಪಾಪ ಪ್ರಜ್ಞೆಯ ನಾಟಕವನ್ನಾದರೂ ಆಡಿದರೆ; ಅಷ್ಟರ ಮಟ್ಟಿಗೆ ನಮ್ಮ ನೈತಿಕತೆ ಹೆಚ್ಚುತ್ತದೆ... ಅಲ್ಲವೆ ಎಂದು ಉದ್ಯಮಿ ತೂರಾಡಿದ. 'ಬಿಡ್ರಿ ಸಾರ್ ಈ ಊಸಿನ ಟಾಪಿಕ್ಕನ್ನು' ಎಂದು ಪರಮಾನಂದ ತಡೆ ಒಡ್ಡಿ ಮತ್ತೊಂದು ಸುತ್ತಿನ ಪೆಗ್ ಎತ್ತಿ; ಬಗೆ ಬಗೆಯ ಮಾಂಸಾಹಾರವ ಸವಿಯತೊಡಗಿದ. 'ನೋಡೀ ನೀವು ಇಷ್ಟು ಇಷ್ಟ ಪಟ್ಟು ತಿಂತಿದ್ದೀರಲ್ಲಾ ಅದೆಲ್ಲ ಕೊನೆಗೆ ಏನಾಗುತ್ತದೆ...' ಎಂದು ಆ ಶ್ರೀಮಂತ ಕೆಣಕಿದ. 'ಅದೇ... ಅದು ಏನಾಗಬೇಕು ಅಂತಿರುತ್ತೊ ಅದೇ ಆಗುತ್ತೆ' ಎಂದ ಗೋವಿಂದ. ಥೂ; ಸವಿಯಾದ್ದ ತಿನ್ನುವಾಗ ಏನೇನೊ ಅಸಹ್ಯ ಕಲ್ಪನೆಗಳು ಕಣ್ಣ ಮುಂದೆ ಬರುವಂತೆ ಮಾತಾಡ್ತಿರಲ್ಲಾ... ಸ್ವಲ್ಪ ಮ್ಯೂಸಿಕ್ ಹಾಕಿ... ಕ್ಲಾಸಿಕಲ್ ರಾಗಗಳು ಕಿವಿ ಮೇಲೆ ಬಿದ್ದರೆ ಕೆಟ್ಟ ಹರಟೆ ಮಾತುಗಳು ಅವಿತುಕೊಳ್ಳುತ್ತವೆ ಎನ್ನುತ್ತಲೇ ನಿಯಂತ್ರಣ ಮೀರಿ ಬಟ್ಟೆ ಹರಿದಂತೆ ಡರ್.. ಎಂದು ಊಸು ಬಿಟ್ಟರು ಪ್ರಾಧ್ಯಾಪಕರು.

ಜೀನಿಯಸ್ ನಗಾಡುತ್ತ; 'ಪ್ರೊಫೆಸರ್ ನೀವು ದಿನ ಒಂದರಲ್ಲಿ ಎಷ್ಟು ಬಾರಿ ಊಸುತ್ತೀರಿ ಎಂಬುದ ಸರಿಯಾಗಿ ಕ್ಯಾಲಿಕ್ಯುಲೇಟಾಗಿ ಹೇಳಿ' ಎಂದು ಸವಾಲು ಎಸೆದರು. 'ನೋನೋ; ಐ ಹ್ಯಾವ್ ನೋ ಐಡಿಯಾ... ಊಸು ನ್ಯಾಚುರಲ್. ಅವನ್ನೆಲ್ಲ ಎಣಿಸಬಾರದು.' 'ವಾಟ್ ಪ್ರೊಫೆಸರ್? ಆರ್ ಯೂ ಆ್ಯನ್ ಇಗ್ನೊರೆಂಟ್! ಡೊಂಟ್ ಯೂ ನೊ ದಿ ಕೌಂಟ್ ಆಫ್ ಊಸು... ಇಂಡಿಯಾದಲ್ಲಿ ಒಂದು ಮನೆಯಲ್ಲಿ ಎಷ್ಟು ಊಸುಗಳು ಇರ್ತವೆ... ಒಂದು ಪೇಟೆ ಪಟ್ಟಣ ಮಹಾನಗರಗಳಲ್ಲಿ ಎಷ್ಟೊಂದು ಸಿವೇಜ್ ವಾಟರ್ ಹರಿಯುತ್ತೆ. ಎಷ್ಟು ಶತಕೋಟಿ ಊಸುಗಳು ಗಾಳಿಯಲ್ಲಿ ಬೆರೆತು ವಾತಾವರಣ ಸೇರುತ್ತವೆ ಎಂಬ ಬಗ್ಗೆ ಇಷ್ಟು ದಿವ್ಯ